ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (230) 100
ಮಾನ್ಯ ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ.
ಉತ್ತರಿಸುವ ಸಚಿವರು : (ಶ್ರೀ ಹೆಚ್. ಹಾಲಪ್ಪ)
ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಿ.ಪಿ.ಎಲ್. ಎ.ಪಿ.ಎಲ್. ಪಡಿತರ ಚೀಟಿ ನೀಡುವಲ್ಲಿ ಫಲಾನುಭವಿಗಳನ್ನು ಗುರುತಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು? | ಬಿ.ಪಿ.ಎಲ್. ಎಪಿಎಲ್ ಪಡಿತರ ಚೀಟಿ ನೀಡುವಲ್ಲಿ ಫಲಾನುಭವಿಗಳನ್ನು ಗುರುತಿಸಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳನ್ನು ಕೆಳಕಂಡಂತಿರುತ್ತದೆ.<br>ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ :<br>ಮೂಲ ಬುಡಕಟ್ಟು (Primitive tribe) ಕುಟುಂಬಗಳು. ಬಡವರಲ್ಲಿ ಕಡು ಬಡವರು. ಕುಟುಂಬಗಳಿಲ್ಲದ ಜೀವನ ನಿರ್ವಹಣೆಗೆ ನಿಶ್ಚಿತ ಆದಾಯ ಹಾಗೂ ಸಾಮಾಜಿಕ ನೆರವಿಲ್ಲದ 60 ಅಥವಾ 60 ವರ್ಷಕ್ಕಿಂತ ಮೇಲ್ಪಟ್ಟ ಏಕ ಪುರುಷ ಹಾಗೂ ಏಕ ಮಹಿಳೆ. ವಿಧವೆ. ಅನಾರೋಗ್ಯ ಪೀಡಿತ ಕುಟುಂಬಗಳು. ವಿಧವೆ ಅಥವಾ ಅನಾರೋಗ್ಯ ಪೀಡಿತ ವ್ಯಕ್ತಿಗಳು / ಅಂಗವಿಕಲರು / 60 ಹಾಗೂ 60 ಕ್ಕೆ ಮೇಲ್ಪಟ್ಟ ವಯಸ್ಸಿನ ಜೀವನ ನಿರ್ವಹಣೆಗೆ ಯಾವುದೇ ನಿಶ್ಚಿತ ಆದಾಯ ವಿಲ್ಲದ /ಸಾಮಾಜಿಕ ನೆರವಿಲ್ಲದ ಕುಟುಂಬಗಳವರು. ಬಿಪಿಎಲ್ ಪಡಿತರ ಚೀಟಿಯನ್ನು ಪಡೆದ ಕಡು ಬಡವರು ಅಂದರೆ ಕೃಷಿ ಕಾರ್ಮಿಕರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರು.<br>ಬಿಪಿಎಲ್ (ಅಕ್ಷಯ) ಪಡಿತರ ಚೀಟಿ ;–<br>ಗ್ರಾಮಾಂತರ ಪ್ರದೇಶದಲ್ಲಿ 12.000/– ರೂ.ಗಳವರೆಗಿನ ವಾರ್ಷಿಕ ವರಮಾನ. ಪಟ್ಟಣ ಪ್ರದೇಶದಲ್ಲಿ 17.000/– ರೂ.ಗಳ ವರೆಗಿನ ವಾರ್ಷಿಕ ವರಮಾನವುಳ್ಳ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅರ್ಹರು.<br>ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಕುಟುಂಬಗಳು ಅಕ್ಷಯ ಪಡಿತರ ಚೀಟಿ ಪಡೆಯಲು |

| | | |
|---|---|---|
| | | ಅರ್ಹರಿರುವುದಿಲ್ಲ.<br>3 ಹೆಕ್ಟೇರ್ ಒಣ ಭೂಮಿ ಅಥವಾ ತತ್ಸಮಾನವಾದ ನೀರಾವರಿ ಭೂಮಿ ಹೊಂದಿರುವವರು.<br>ಸ್ಥಿರ ದೂರವಾಣಿ ಹೊಂದಿರುವವರು.<br>ಸ್ವಂತವಾಗಿ ಯಾರೇ ಡೀಸೆಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು. (ಲೂನಾ/ ಟಿವಿಎಸ್ ಹೊಂದಿರುವವರನ್ನು ಹೊರತುಪಡಿಸಿ)<br>ಬ್ಯಾಂಕ್/ಸಹಕಾರಿ ಸಂಘಗಳಲ್ಲಿ 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು.<br>ಒಂದು ಬೋರ್ ವೆಲ್ ಹೊಂದಿ. ನೀರಾವರಿ ಸೌಕರ್ಯ ಪಡೆಯುತ್ತಿರುವವರು.<br>ತಿಂಗಳಿಗೆ ರೂ.1.000 ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ ಸರ್ಕಾರೇತರ/ ಖಾಸಗಿ ಸಿಬ್ಬಂದಿಗಳು.<br>ಆದಾಯ ತೆರಿಗೆ ಪಾವತಿಸುವವರು.<br>ರಿಜಿಸ್ಟರ್ಡ್ ಕಾಂಟ್ರಾಕ್ಟರ್. ಎಪಿಎಂಸಿ ಟ್ರೇಡರ್ಸ್/ ಕಮೀಷನ್ ಏಜೆಂಟ್ಸ್/ ಬೀಜ/ ರಸಾಯನಿಕ ಗೊಬ್ಬರ ಇತ್ಯಾದಿಗಳ ಮಾರಾಟಗಾರರು.<br>ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸಲಾಗುವುದು.<br>ನಗರ ಪ್ರದೇಶದಲ್ಲಿ ಮೇಲ್ಕಂಡ ಮಾನ ದಂಡಗಳ ಜೊತೆಗೆ ಈ ಕೆಳಕಂಡ ಮಾನದಂಡಗಳು ಒಳಗೊಂಡಿರುತ್ತವೆ.<br>20' x 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು.<br>ರಸ್ತೆ ಬದಿಯಲ್ಲಿ ಹಾಗೂ ಸಣ್ಣಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ |

| | | |
|---|---|---|
| | | ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು.<br>ವಾಸದ/ ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ. 2000/– ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ.<br>ಎಪಿಎಲ್ ಪಡಿತರ ಚೀಟಿ :–<br>ಗ್ರಾಮಾಂತರ ಪ್ರದೇಶದಲ್ಲಿ ಗರಿಷ್ಠ 12.000/– ರೂ.ಗಳ ವಾರ್ಷಿಕ ವರಮಾನಕ್ಕಿಂತ ಮೇಲ್ಪಟ್ಟ ಪಟ್ಟಣ ಪ್ರದೇಶದಲ್ಲಿ 17.000 /– ರೂ.ಗಳ ವಾರ್ಷಿಕ ವರಮಾನಕ್ಕಿಂತ ಮೇಲ್ಪಟ್ಟ ಆದಾಯವುಳ್ಳ ಕುಟುಂಬಗಳು ಎಪಿಎಲ್ ಪಡಿತರ ಚೀಟಿಯನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ. |
| ಆ) | ಈ ಮಾನದಂಡಗಳ ವ್ಯಾಪ್ತಿಯಲ್ಲಿ ಬಹಳಷ್ಟು ಬಡವರು ಪಡಿತರ ಚೀಟಿ ಪಡೆಯಲು ಸಾಧ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಇಲ್ಲ. |
| ಇ) | ಹಾಗಿದ್ದಲ್ಲಿ. ಮಾನದಂಡವನ್ನು ಬದಲಾಯಿಸುವ ಬಗ್ಗೆ ಸರ್ಕಾರದ ಚಿಂತನೆ ಇದೆಯೇ? (ವಿವರ ನೀಡುವುದು) | ಇಲ್ಲ. |